ಶ್ರೀ ಎಚ್. ಸುಬ್ಬರಾವ್.—ಸ್ವಾಮಿ, ಈ ಪ್ರಶ್ನೆಗೆ ಕೊಟ್ಟಿರತಕ್ಕ ಉತ್ತರದಲ್ಲಿ ಇದನ್ನು ಪರಿಶೀಲನೆಯಾಗುವುದು ಎಂದು ಹೇಳಿದ್ದೀರಿ, ಇದು ಪರಿಶೀಲನೆಯಾಗಿದೆಯೇ, ಇದರ ಬಗ್ಗೆ ಏನು ಆಲೋಚನೆ ಮಾಡಿದ್ದೀರಿ ಎಂಬುದನ್ನು ಹೇಳುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—1966-67 ರಲ್ಲಿ ಸೀ ಎರೋಜನ್ ಆಗಿದೆ. ಆ ಸ್ಥಳಕ್ಕೆ ನಾನು, ಕೇಂದ್ರದ ಮಂತ್ರಿಗಳು ಮತ್ತು ಮುಖ್ಯ ಮಂತ್ರಿಗಳು ಹೋಗಿ ನೋಡಿಕೊಂಡು ಬಂದಿದ್ದೇವೆ. ಅಲ್ಲಿ ಎರಡು ಸಲ ಸೀ ಎರೋಜನ್ ಆಗಿರುವುದರಿಂದ ಅಲ್ಲಿ ಬಂಡೆಗಳನ್ನು ತಂದು ಹಾಕಿದ್ದಾರೆ. ಕೊಚ್ಚಿ ಹೋಗುವುದನ್ನು ಸ್ವಲ್ಪಮಟ್ಟಿಗೆ ತಡೆಗಟ್ಟಬೇಕೆಂದು ವಿಚಾರ ಮಾಡುತ್ತಿದ್ದೇವೆ. ಪ್ರೊಟೆಕ್ಟೀವ್ ವರ್ಕ್ ಯಾವರೀತಿ ಮಾಡಬೇಕೆಂಬುದನ್ನು ಯೋಚನೆ ಮಾಡುತ್ತಿದ್ದೇವೆ. ಅಲ್ಲಿರತಕ್ಕ ಜಮೀನಿನ ಮಣ್ಣನ್ನು ಪೂನಾ ರಿಸರ್ಚ್ ಸ್ಟೇಷನ್ನಿಗೆ ಕಳುಹಿಸಿ ಟೆಸ್ಟ್ ಮಾಡಿಸಿ ಅದನ್ನು ಸ್ವಲ್ಪ ಸ್ಟಡಿ ಮಾಡಿ ಆ ನಂತರ ಆ ಕೆಲಸವನ್ನು ಮಾಡಬೇಕಾಗುತ್ತದೆ.

Opening of Left Bank of 'Kanva' Project

10. **Sri C. R. RANGE GOWDA** (Magadi).—

Will the Minister for Public Works be pleased to state:—

(*a*) whether it is a fact that the Left Bank of the 'Kanva' Project was cut open last year to let out extra water that collected in the Reservoir ;

(*b*) if so, whether the Government has assessed the damage caused by this breach to the ryots ;

(*c*) whether any compensation has been paid to each ryot whose lands are damaged ;

(*d*) if not, when they intend to compensate them ?

A.—**Sri ALUR HANUMANTHAPPA** (Deputy Minister for Minor Irrigation).—

(*a*) No. But on the right side, wasteweir had to be lowered by 2½ feet for a length of 15 feet, and the right flank had to be cut open and flood gap created.

(*b*) Yes.

(*c*) Relief in the form of interest-free loans has been paid to the concerned ryots.

(*d*) Does not arise in view of reply to clause (*c*).

ಶ್ರೀ ಸಿ. ಆರ್. ರಂಗೇಗೌಡ.—ಸ್ವಾಮಿ, ಈ ಪ್ರಶ್ನೆಗೆ ಕೊಟ್ಟಿರತಕ್ಕ ಉತ್ತರದಲ್ಲಿ ಬಲಗಡೆ ಕೋಡಿಯನ್ನು 15 ಅಡಿಗಳ ವರೆಗೆ ಎರಡೂವರೆ ಅಡಿಗಳಷ್ಟು ತಗ್ಗಿಸಲೇ ಬೇಕಾಯಿತು ಎಂದು ಹೇಳಿದ್ದೀರಿ, ಮತ್ತು ಅಲ್ಲಿ ಹೆಚ್ಚು ನಷ್ಟವಾಗಿದೆ ಎಂದು ಹೇಳಿದ್ದೀರಿ, ಎಷ್ಟು ಜನಗಳಿಗೆ ಫನಲು ಮತ್ತು ಜಮೀನು ನಷ್ಟವಾಗಿದೆ ಎಂಬುದನ್ನು ಅಸೆಸ್ ಮಾಡಿದ್ದೀರಾ ?

†ಶ್ರೀ ಆಲೂರು ಹನುಮಂತಪ್ಪ.—3 ಜನ ರೈತರಿಗೆ ನಷ್ಟವಾಗಿದೆ. ಎರಡು ಎಕರೆ ಜಮೀನು, ಎರಡು ಸಾವಿರ ರೂಪಾಯಿಗಳ ಬೆಳೆ ನಷ್ಟವಾಗಿದೆ ಎಂದು ವರದಿ ಬಂದಿದೆ.

ಶ್ರೀ ಸಿ. ಆರ್. ರಂಗೇಗೌಡ.—ಅಲ್ಲಿ ನಷ್ಟಕ್ಕೊಳಗಾದ ರೈತರಿಗೆ ಬಡ್ಡಿ ರಹಿತ ಸಾಲದ ರೂಪದಲ್ಲಿ ಪರಿಹಾರವನ್ನು ಕೊಡಲಾಯಿತು ಎಂದು ಹೇಳಿದ್ದೀರಿ, ಆದರೆ ಆ ರೈತರು ಡಿವಿಜನಲ್ ಕಮಿಷನರಿಗೆ, ಮತ್ತು ಡೆಪ್ಯುಟಿ ಕಮಿಷನರಿಗೆ ಪರಿಹಾರಕ್ಕಾಗಿ ಅರ್ಜಿಯನ್ನು ಕೊಟ್ಟಿದ್ದಾರೆ. ಆದರೂ ಸಹ ಅವರಿಗೆ ಪರಿಹಾರ ಸಿಕ್ಕಿಲ್ಲ. ಹೀಗಿರುವಾಗ ತಪ್ಪು ಉತ್ತರವನ್ನು ಏತಕ್ಕೆ ಕೊಟ್ಟಿದ್ದೀರಿ ?

ಶ್ರೀ ಆಲೂರು ಹನುಮಂತಪ್ಪ.—ಆ ಮೂರು ಜನ ರೈತರ ಪೈಕಿ ಒಬ್ಬರಿಗೆ 975 ರೂಪಾಯಿ ಗಳ ಬಡ್ಡಿ ರಹಿತ ಸಾಲವನ್ನು ಕೊಟ್ಟಿದೆ. ಬೇರೆಯವರಿಗೆ ಕೊಟ್ಟಿಲ್ಲ. ಅವನ್ನು ಡೆಪ್ಯುಟಿ ಕಮೀಷನರ ಮುಖಾಂತರ ಉಳಿದವರಿಗೂ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಸಿ. ಆರ್. ರಂಗೇಗೌಡ.—ಎಲ್ಲಿ ನಷ್ಟಕ್ಕೊಳಗಾಗಿರುವ ರೈತರಿಗೆ ಪ್ರತಿಯೊಬ್ಬರಿಗೂ ಪರಿ ಹಾರವನ್ನು ಕೊಟ್ಟಿದ್ದೇವೆಂದು ಉತ್ತರದಲ್ಲಿ ಹೇಳಿದ್ದೀರಿ, ಈಗ ಹೇಳುತ್ತೀರಿ, ಕೆಲವರಿಗೆ ಪರಿಹಾರ ವನ್ನು ಕೊಟ್ಟಿದೆ, ಕೆಲವರಿಗೆ ಕೊಟ್ಟಿಲ್ಲ ಎಂದು ಆ ಜಮೀನ್ದಾರರಿಗೆ ಆಗಿರತಕ್ಕಂಥ ನಷ್ಟ ಎಷ್ಟು, ಅವರಿಗೆ ಕೊಟ್ಟಿರುವ ಸಾಲ ಎಷ್ಟು?

ಶ್ರೀ ಆಲೂರು ಹನುಮಂತಪ್ಪ.—ಅಲ್ಲಿ ನಷ್ಟ ಏನೂ ಹೆಚ್ಚಿಗೆ ಆಗಿಲ್ಲ. ಸರ್ಕಾರಿ ಜಮೀನಿಗೆ ಸ್ವಲ್ಪಮಟ್ಟಿಗೆ ಡ್ಯಾಮೇಜ್ ಆಗಿದೆ. ಕೃಷ್ಣಯ್ಯ ಎನ್ನುವವರಿಗೆ 25 ಗುಂಟೆ ಜಮೀನು ಡ್ಯಾಮೇಜ್ ಆಗಿದೆ. ಗೋಪಣ್ಣ ಎನ್ನುವವರಿಗೆ ಒಂದು ಎಕರೆ 5 ಗುಂಟೆ ಜಮೀನು ಡ್ಯಾಮೇಜ್ ಆಗಿದೆ. ಪೋಟೇಗೌಡ ಎನ್ನುವವರಿಗೆ 8 ಗುಂಟೆ ಜಮೀನಿಗೆ ಡ್ಯಾಮೇಜಾಗಿದೆ. ಈಗ ಅಲ್ಲಿ ಸುಮಾರು 2 ಸಾವಿರ ರೂಪಾಯಿಗಳ ಡ್ಯಾಮೇಜ್ ಆಗಿದೆ. ಈಗಾಗಲೇ ಗೋಪಣ್ಣ ಎನ್ನುವವರಿಗೆ ಬಡ್ಡಿ ರಹಿತ ಸಾಲವನ್ನು ಕೊಟ್ಟಿದೆ. ಬೇರೆಯವರಿಗೆ ಕೊಟ್ಟಿಲ್ಲ.

ಶ್ರೀ. ಸಿ. ಆರ್. ರಂಗೇಗೌಡ.—ಆ ಹಾನಿಗೊಳಗಾಗಿರುವ ರೈತರಿಗೆ ಬಡ್ಡಿ ರಹಿತ ಸಾಲ 250–200 ರೂಪಾಯಿಗಳನ್ನು ಸಾಲವಾಗಿ ಕೊಟ್ಟರೂ ಅವರಿಗೆ ಇದರಿಂದ ಹೆಚ್ಚು ಪ್ರಯೋಜನವಾ ಗುವುದಿಲ್ಲ. ಆದ್ದರಿಂದ ಅವರಿಗೆ ಬೇರೆ ಕಡೆ ಜಮೀನು ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಆಲೂರು ಹನುಮಂತಪ್ಪ.—ಅದನ್ನು ಪರಿಶೀಲನೆ ಮಾಡುತ್ತೇವೆ.

Construction of Feeder Channel from Devarahosahalli Tank

11. **Sri GANGA BOVI** (Gulur) :—

Will the Minister for Public Works be pleased to state.—

(*a*) whether it is a fact that they have been requested for the construction of a feeder channel from Devarahosahalli tank in Sompura Hobli, Nelamangala Taluk to Mydala tank in Urdagere hobli, Tumkur Taluk, as the water supplied from the said Mydala tank to Tumkur is insufficient;

(*b*) if so, the reason for not constructing the same;

(*c*) whether they are contemplating to construct the same at least now?

A.—**Sri ALUR HANUMANTHAPPA** (Deputy Minister for Minor Irrigation).—

(*a*) No.

(*b*) Does not arise in view of reply to clause (*a*).

(*c*) No.

ಶ್ರೀ ಗಂಗಾಬೋವಿ.—ಸ್ವಾಮಿ ಮೈದಾಳದ ಕೆರೆಯಿಂದ ತುಮಕೂರಿಗೆ ನೀರು ಸರಬರಾಜು ಮಾಡುತ್ತಿದ್ದಾರ್ಗೂ ನೀರು ಸಾಕಷ್ಟಿಲ್ಲದಿರುವುದರಿಂದ ಒಂದು ಚಾನಲ್ ಮಾಡಬೇಕೆಂದು ಕೇಳಿದರೂ ಕೂಡ ತಾವು ಉತ್ತರದಲ್ಲಿ ಉದ್ಭವಿಸುವುದಿಲ್ಲ ಎಂದು ಹೇಳಿದ್ದೀರಿ. ಆದರೆ ತುಮಕೂರು ಟೌನಿಗೆ ನೀರು ಸಾಲದಿರುವುದರಿಂದ ತಾವು ಒಂದು ಚಾನಲ್ ಮಾಡಿಸಿಕೊಡುವುದಕ್ಕೆ ಸಾಧ್ಯವಿದೆಯೇ?

† ಶ್ರೀ ಆಲೂರು ಹನುಮಂತಪ್ಪ.—ಮಾನ್ಯ ಸದಸ್ಯರು ಹೇಳಿದ್ದು ಒಂದು ಸಲಹೆ. ಅದನ್ನು ಪರಿಶೀಲನೆ ಮಾಡುತ್ತೇವೆ. ಜೊತೆಗೆ ಒಂದು ಮತ್ತು ಎರಡನೆ ಸ್ಟೇಜಿಗೆ ತುಮಕೂರು ನೀರು